ದಿನಾಂಕಃ 09/02/2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀಸವಾಲುಃ ವಾದಿ ಪರ ಶ್ರೀ ಎಸ್.ಆರ್.ಎನ್. ವಕೀಲರಿಂದಃ

ದಾವಾಸ್ವತ್ತು ಸರ್ಕಾರಿ ಜಮೀನು ಎಂದು ನಾನು ಹೇಳಿದ್ದು, ಅದು ಯಾವ ರೀತಿ ಸರ್ಕಾರದ ಜಮೀನು ಎಂದರೆ ಸಾಕ್ಷಿ ಗೋಮಾಳ ಜಮೀನು ಎನ್ನುತ್ತಾರೆ. ದಾವಾಸ್ವತ್ತಿನ ವಿಸ್ತೀರ್ಣ 5 ಎಕರೆ ಇರುತ್ತದೆ. ಸದರಿ ಜಮೀನು ಸರ್ಕಾರಿ ಜಮೀನು ಆಗಿರುವ ಕಾರಣ ಸ.ನಂ.72 ರ ಒಟ್ಟು ವಿಸ್ತೀರ್ಣ ಎಷ್ಟು ಎಂದರೆ ನನಗೆ ಗೊತ್ತಿಲ್ಲ. ಸದರಿ ಒಟ್ಟು ಜಮೀನಿನಲ್ಲಿ ಎಷ್ಟು ಜನ ಸಾಗುವಳಿದಾರರಿದ್ದಾರೆಂದು ಹೇಳಲು ಆಗುವುದಿಲ್ಲ. ದಾವಾಸ್ವತ್ತಿನ ಚೆಕ್ಕುಬಂಧಿ ಹೇಳಲು ಆಗುವುದಿಲ್ಲ.

ನನಗೆ ಮೂರು ಜನ ಮಕ್ಕಳಿದ್ದಾರೆ. ದಾವಾಸ್ವತ್ತಿನಲ್ಲಿದ್ದ ಗಿಡಗಂಟೆಗಳನ್ನು ತೆಗೆಯುವಾಗ ಯಾರು ಯಾರು ಬಂದಿದ್ದರು ಎಂದರೆ ಸಾಕ್ಷಿಯು ಸದರಿ ಕಾಲಕ್ಕೆ ನನ್ನ ಮಕ್ಕಳು ಸಣ್ಣ ಮಕ್ಕಳಾಗಿದ್ದು ನನ್ನ ತಂದೆ ಸದರಿ ಗಿಡಗಂಟೆಗಳನ್ನು ಕಡಿದಿರುತ್ತಾರೆ. ಸದರಿ ಕಾಲಕ್ಕೆ ಯಾರು ಯಾರು ಕೂಲಿಯಾಳುಗಳು ಬಂದಿದ್ದರು ಎಂದರೆ ಸೋಮ್ಲುನಾಯ್ಕು, ಬದ್ಯಾನಾಯ್ಕ ಮತ್ತು ಇತರೆ ಐದು ಜನ ಸೇರಿ ಕಡಿದಿರುತ್ತೇವೆ. ಆದರೆ ಎಲ್ಲಾರ ಹೆಸರನ್ನು ಹೇಳಲು ಆಗುವುದಿಲ್ಲ. ಸದರಿ ಜಮೀನಿನಲ್ಲಿನ ಗಿಡಗಂಟೆಗಳನ್ನು ತೆಗೆದು ಸಾಗುವಳಿಗೆ ಯೋಗ್ಯ ಭೂಮಿ ಮಾಡು ಎಷ್ಟು ದಿನ ಕಾಲಾವಕಾಶ ಬೇಕಾಯಿತು ಎಂದು ಹೇಳಲು ಆಗುವುದಿಲ್ಲ. ದಾವಾಸ್ವತ್ತಿನಲ್ಲಿ ನಾನು ಎಷ್ಟು ವರ್ಷಗಳಿಂದ ಸ್ವಾಧೀನಾನುಭವದಲ್ಲಿದ್ದೇನೆ ಎಂದು ಹೇಳಲು ಆಗುವುದಿಲ್ಲ. ದಾವಾಸ್ವತ್ತಿನಲ್ಲಿ ಸಾಗುವಳಿ ಮಾಡಲು ಯಾವ ವರ್ಷ ಪ್ರಾರಂಭಿಸಿದೆ ಎಂದು ಹೇಳಲು ಆಗುವುದಿಲ್ಲ. ಏಕೆಂದರೆ ನಾನು ಚಿಕ್ಕವಯಸ್ಸಿನವಳಿದ್ದಾಗ ನನ್ನ ತಂದೆ ಸಾಗುವಳಿ ಮಾಡುತ್ತಿದ್ದರು. ಯಾವ ವರ್ಷದಿಂದ ನನ್ನ ತಂದೆ ಸಾಗುವಳಿ ಮಾಡಲು ಪ್ರಾರಂಭಿಸಿದರು ಎಂದು ನನ್ನ ತಂದೆಯಿಂದ ಕೇಳಿ ತಿಳಿದು ಕೊಂಡಿಲ್ಲ. ನನಗೆ ಸಹಿ ಮಾಡಲು ಬರುವುದಿಲ್ಲ.

ಸಾಮಾನ್ಯವಾಗಿ ಮನುಷ್ಯನಿಗೆ ಜೀವಿಸಲು ಏನೆಲ್ಲಾ ಮೂಲಭೂತ ಅಗತ್ಯಗಳು ಬೇಕೆಂದು ನನಗೆ ಗೊತ್ತು. ದಾವಾಸ್ವತ್ತಿನ ಮಂಜೂರಾತಿಗಾಗಿ ಅರ್ಜಿಯನ್ನು ಸಂಬಂಧಿಸಿದ ಇಲಾಖೆಗೆ ಸಲ್ಲಿಸ

ಬೇಕೆನ್ನುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿ. ನಾನು ಸರ್ಕಾರಕ್ಕೆ ಯಾವುದೇ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿ ನನ್ನನ್ನು ಹೆದರಿಸಿ ನನ್ನ ಮೇಲೆ ಗಲಾಟೆ ಮಾಡಿದ ಕಾರಣ ನಾನು ಅರ್ಜಿ ಸಲ್ಲಿಸಲಿಲ್ಲ ಎನ್ನುತ್ತಾರೆ. ಪ್ರತಿವಾದಿ ನನಗೆ ಹೆದರಿಸಿಲ್ಲ, ನನ್ನ ಮೇಲೆ ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ.

ನನಗೆ ಓದು ಬರಹ ಬರುತ್ತದೆ ಎಂದರೆ ಸರಿಯಲ್ಲ. ಓದು ಬರಹ ಗೊತ್ತಿರುವವರ ಮೂಲಕ ದಾವಾಸ್ವತ್ತಿನ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನನ್ನ ವಾದ ಪತ್ರದ 3 ನೇ ಕಂಡಿಕೆಯಲ್ಲಿ ಹೇಳಿರುವಂತೆ ಗ್ರಾಮ ಅರಣ್ಯ ಸಮಿತಿಯ ಉದ್ದೇಶ ಏನು ಎಂದು ನನಗೆ ಗೊತ್ತಿಲ್ಲ.

<u>ಮುಂದುವರೆದ ಪಾಟೀಸವಾಲುಃ</u> ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು.

**ತೆರೆದ ನ್ಯಾಯಾಲಯದಲ್ಲಿ ನನ್ನ ಉ. ಲೇ. ಮೇ. ಬೆ ಮಾಡಲಾಯಿತು.**

ಓದಿ.ಕೇ ಸ ಇ ಎ ಒ

**2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,**
**ಶಿಕಾರಿಪುರ.**